**ಸಾಕ್ಷಿಗೆ ದಿನಾಂಕ 25.03.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ ವಕೀಲರಿಂದ**

ಸರ್ವೆ ನಂಬರ 22/6 ಜಮೀನನ್ನು ಸರ್ಕಾರದಿಂದ ಕಾಳೇಗೌಡರವರಿಗೆ ಬಿನ್ ಹುಚ್ಚೇಗೌಡ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾಳೇಗೌಡ ಬಿನ್ ಹುಚ್ಚೇಗೌಡರವರಿಗೆ ಜಮೀನು ಮಂಜೂರು ಮಾಡುವಾಗ ಅವರ ಜೊತೆಗೆ 13 ಜನರಿಗೆ ಜಮೀನು ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-15 ರಲ್ಲಿ ಸದರಿ 13 ಜನರ ಹೆಸರು ನಮುದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 13 ಜನರ ಸ್ವಾಧೀನತೆಯನ್ನು ದೃಢೀಕರಿಸಿ ನಿಪಿ-17 ರಂತೆ ನಕ್ಷೆಯನ್ನು ತಯಾರಿಸಿ ಸರ್ಕಾರಕ್ಕೆ ಹಾಜರುಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಸ್ವಾಧೀನತೆಯನ್ನು ಪರಿಗಣಿಸಿ ತಹಶೀಲ್ದಾರವರು ನಿಪಿ-17 ರಂತೆ ಜಮೀನು ಮಂಜುರಾತಿ ಮಾಡಲು ಅನುಮತಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 22 ರ ಜಮೀನು ದುರಸ್ತಾದ ನಂತರ ನಿಪಿ-18 ರಂತೆ ಒಟ್ಟು 13 ಫಲಾನುಭವಿಗಳಿಗೆ ಪೋಡಿ ತಖ್ತೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-15 ರಿಂದ 18 ದಾಖಲೆಗಳಲ್ಲಿ ನನ್ನ ಮಾವ ಕಾಳೇಗೌಡರವರ ಹೆಸರು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-23 ರಲ್ಲಿ ನಮೂದಿಸಿರುವ ಚೆಕ್ಕುಬಂದಿ ಹಾಗೂ ದಾವಾ ಸ್ವತ್ತಿನ ಚೆಕ್ಕುಬಂದಿ ಬೇರೆ ಬೇರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮಾವ ಕಾಳೇಗೌಡರವರಿಗೆ 1957 ರಲ್ಲಿ ಜಮೀನು ಮಂಜೂರಾಗಿದೆ ಎಂದು ಹೇಳಿದ್ದು ಆ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 68 ರ ಜಮೀನಿಗೆ 1957 ರಿಂದಲೂ ಯಾವುದೇ ಕಂದಾಯ ಕಟ್ಟಿಲ್ಲ ಎಂದರೆ ಸರಿಯಲ್ಲ. ತೆರಿಗೆ ಪಾವತಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ-13 ರ ಪ್ರಕಾರ ಡೊಳ್ಳೇಗೌಡ ಮತ್ತು ಅವರ ಅಣ್ಣತಮ್ಮಂದಿರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ನಿಪಿ-13 ರಲ್ಲಿ ಸರ್ವೆ ನಂಬರ 68 ಕ್ಕೆ ಸಂಬಂಧಿಸಿದಂತೆ ಖಾತೆ ಆಗಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂಬರ 68 ಕ್ಕೆ ಸಂಬಂಧಿಸಿದಂತೆ ನಮ್ಮ ಹೆಸರಿಗೆ ಖಾತೆ ಆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 22/19 ರಲ್ಲಿ 04 ಎಕರೆ ಜಮೀನಿಗೆ ಕಾಳೇಗೌಡ ಬಿನ್ ಡೊಳ್ಳೇಗೌಡರವರ ಹೆಸರಿಗೆ ಕ್ರಯದಂತೆ ಖಾತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಂದಾಯ ಅಧಿಕಾರಿಗಳ ತಪ್ಪಿನಿಂದ ತಪ್ಪಾಗಿ ಕಂದಾಯ ದಾಖಲೆಗಳು ನಮುದಾಗಿದ್ದರಿಂದ ಅದನ್ನೇ ದುರುಪಯೋಗ ಪಡಿಸಿಕೊಂಡು ಸರ್ವೆ ನಂಬರ 68 ನಮ್ಮ ಹೆಸರಿಗೆ ಖಾತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1957 ರಿಂದಲೂ ಮಂಜೂರಾದ ಮಂಜುರದಾರರಿಂದ ಹಿಡಿದು ಕ್ರಯದಾರರವರೆಗೂ ಕ್ರಯದಂತೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯರು ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮೈದುನ ಹಾಗೂ ಭಾವಂದಿರಿಗೆ ಸರ್ವೆ ನಂಬರ 68 ನಮಗೆ ಸೇರಿದ್ದು ಎಂಬ ವಿಚಾರ ಅವರಿಗೆ ಗೊತ್ತಿರುತ್ತದೆ. ನಾನು ನನ್ನ ಭಾವಂದಿರ ಜೊತೆ ಅನ್ಯೋನ್ಯವಾಗಿಲ್ಲ. ನನ್ನ ಮಾವನಿಗೆ ಸೇರಿದ ಜಮೀನನ್ನು ನಾನು ಹಾಗೂ ಭಾವಂದಿರು ಹಂಚಿಕೊಂಡಿರುತ್ತೇವೆ. ಸದರಿ ಜಮೀನುಗಳ ಚೆಕ್ಕುಬಂದಿ ಹಾಗೂ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಅನ್ಯತ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**